## ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ

### ದಿನಾಂಕಃ 08.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಪಾಟೀ ಸವಾಲುಃ ವಾದಿಗಳ ಪರ ಶ್ರೀ . ಎನ್.ಆರ್.ಸಿ.ವಕೀಲರಿಂದಃ

ನಾನು, ವಾದಿ ಮತ್ತು 1 ನೇ ಪ್ರತಿವಾದಿ ಒಂದೇ ಕುಟುಂಬದವರು ಎಂದರೆ ಸರಿ . ದಾವಾಸ್ವತ್ತು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ದಾವಾಸ್ವತ್ತು ಪಿತ್ರಾರ್ಜಿತ ಆಸ್ತಿಯಾದ್ದರಿಂದ ನಮಗೂ ಮತ್ತು ಪ್ರತಿವಾದಿಗಳಿಗೂ ಅದರಲ್ಲಿ ಭಾಗಾಂಶದ ಹಕ್ಕು ಇರುತ್ತದೆ ಎಂದರೆ ಸರಿ . ನನ್ನ ತಂದೆ ದಿಃ03-12-1976 ರಂದು ನನ್ನ ತಾತನಿಗೆ ಉಳಿದ ಒಟ್ಟು ಕುಟುಂಬದ ಆಸ್ತಿಗಳಿಗೆ ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟು ದಾವಾಸ್ವತ್ತನ್ನು ತಾವೇ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ . ಇದಾದ ನಂತರ ದಾವಾಸ್ವತ್ತಿನ ಖಾತೆ ಮತ್ತು ಪಹಣಿ ನನ್ನ ತಂದೆಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿ . ಈಗಲೂ ಸಹ ಅವುಗಳು ನನ್ನ ತಂದೆಯ ಹೆಸರಿನಲ್ಲಿರುತ್ತವೆ ಎಂದರೆ ಸರಿ . ದಾವಾಸ್ವತ್ತನ್ನು ನಾನು , ನನ್ನ ತಂದೆ ಮತ್ತು ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿದ್ದು ಅದರಂತೆ ನಾವು ಪ್ರತ್ಯೇಕ ವಾಸವಿರುತ್ತೇವೆ.

2. ದಿಃ 08-06-2017 ರಂದು ಪಂಚಾಯಿತಿ ಪಾರಿಕತ್ ನ ಮೂಲಕ ನಾವುಗಳು ವಿಭಾಗ ಮಾಡಿಕೊಂಡಿದ್ದು ಅದರಂತೆ ದಾವಾಸ್ವತ್ತಿನ ಖಾತೆ ಮತ್ತುಪಹಣಿ ನಮ್ಮಗಳ ಹೆಸರಿಗೆ ವರ್ಗಾವಣೆ ಆಗಿರುವುದಿಲ್ಲ. ಸದರಿ ವಿಭಾಗದಂತೆ ದಾವಾಸ್ವತ್ತಿನಲ್ಲಿ ನಿರ್ದಿಷ್ಟ ಪ್ರಮಾಣದ ಜಮೀನು ನನಗೆ , ವಾದಿ ಮತ್ತು 1 ನೇ ಪ್ರತಿವಾದಿಗಳಿಗೆ ಬಂದಿರುತ್ತದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಾನು , 1 ಮತ್ತು 2 ನೇ ಪ್ರತಿವಾದಿಗಳು ವಾದಿ ದಾವಾಸ್ವತ್ತಿನಲ್ಲಿ ಭಾಗಾಂಶ ಕೇಳಿದಾಗ ನಿರಾಕರಿಸಿದ್ದರಿಂದ ಅವರು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸದರಿ ಪಂಚಾಯಿತಿ ಪಾರಿಕತ್ ದಿನಾಂಕದಂದು 3 ಮತ್ತು 4 ನೇ ಪ್ರತಿವಾದಿಗಳು ತಮಗೆ ಭಾಗಾಂಶ ಬೇಡ ಎಂದು ತಿಳಿಸಿರುತ್ತಾರೆ. ಸದರಿ ಬಾಗಾಂಶ ಕೇಳಿದಾಗ ನಮ್ಮ ಮತ್ತು ವಾದಿಯ ನಡುವೆ ಗಲಾಟೆ ಆಗಿದ್ದು ಪೋಲೀಸರಿಗೆ ದೂರು ಸಹ ನೀಡಿರುತ್ತೇವೆ ಎಂದರೆ ಸಾಕ್ಷಿ ವಾದಿ ಈ ಹಿಂದೆ ಪಾರಿಕತ್ ನಲ್ಲಿ ನಮೂದು ಮಾಡಿರುವ ಜಮೀನಿಗಿಂತ ಹೆಚ್ಚಿನ ಜಮೀನು ಬೇಕು ಎಂದು ಕೇಳಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 2017 ರಲ್ಲಿ ದಾವಾಸ್ವತ್ತಿನ ಬೆಲೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ನನ್ನ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಯಾದ್ದರಿಂದ ನಮಗೆಲ್ಲರಿಗೂ ಸಮ ಭಾಗಾಂಶದ ಹಕ್ಕಿರುತ್ತದೆ ಎಂದರೆ ಸಾಕ್ಷಿ ನಾವೆಲ್ಲರೂ ಈಗಾಗಲೇ ಸಮವಾಗಿ ದಾವಾಸ್ವತ್ತನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ. 3 ಮತ್ತು 4 ನೇ ಪ್ರತಿವಾದಿಗಳಿಗೆ ಅವರ ಭಾಗಾಂಶದ ಪ್ರತಿಯಾಗಿ ಹಣವನ್ನು ನೀಡಿದ್ದು ಅದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ಸಾಕ್ಷಿಯನ್ನು ನಾನು ಹಾಜರುಪಡಿಸುತ್ತೇನೆ .

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**